## ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ ಟಿ ರವಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.

**ವಿಷಯ**

ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ "ಪಿಹೆಚ್.ಡಿ, ನೆಟ್, ಕೆ.ಸೆಟ್ ಪೂರೈಸದ ಅಧ್ಯಾಪಕರಿಗೂ ಲಕ್ಷ ಲಕ್ಷ ವೇತನ–881 ಅನರ್ಹರಿಗೆ ಯು.ಜಿ.ಸಿ ಸ್ಕೇಲ್" ಎಂಬ ಶಿರೋನಾಮೆಯಡಿ ಪ್ರಕಟವಾಗಿರುವ ವರದಿಯನ್ನು ಪ್ರಸ್ತಾಪಿಸಲು ಬಯಸುತ್ತೇನೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯು.ಜಿ.ಸಿ) ನಿಗದಿಪಡಿಸಿರುವ ವಿದ್ಯಾರ್ಹತೆ ಇಲ್ಲದೆ ಇದ್ದರೂ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿದ್ದ 881 ಸಹಾಯಕ ಪ್ರಾಧ್ಯಾಪಕರು ಲಕ್ಷಾಂತರ ರೂಪಾಯಿ ಯು.ಜಿ.ಸಿ ವೇತನ ಪಡೆಯುತ್ತಿರುವುದು ಬೆಳಕಿಗೆ ಬಂದಿದೆ. ರಾಜ್ಯದಲ್ಲಿ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿದ್ದು, 7 ಸಾವಿರ ಖಾಯಂ ಸಹಾಯಕ ಪ್ರಾಧ್ಯಾಪಕರು, 12 ಸಾವಿರ ಅತಿಥಿ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರಲ್ಲಿ 881 ಉಪನ್ಯಾಸಕರು ಯು.ಜಿ.ಸಿ ವೇತನಕ್ಕೆ ಅನರ್ಹರು ಎಂಬುದನ್ನು ಮಹಾಲೇಖಪಾಲರು ಪತ್ತೆ ಮಾಡಿದ್ದಾರೆ.

ಯು.ಜಿ.ಸಿ ನಿಯಮಗಳ ಪ್ರಕಾರ, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರುಗಳು ಮುಖ್ಯವಾಗಿ ನೆಟ್, ಕೆ.ಸೆಟ್, ಪಿಹೆಚ್.ಡಿ ಪದವಿ ಪಡೆದಿರಬೇಕು. ಆಗ ಮಾತ್ರ 2006ರ ಯು.ಜಿ.ಸಿ ವೇತನ ಶ್ರೇಣಿ ಪಡೆಯಲು ಅರ್ಹರಾಗಿರುತ್ತಾರೆ. ಆದರೆ ನಿಗದಿಪಡಿಸಿದ ಮಾನದಂಡಗಳು ಇಲ್ಲದೆ ಇದ್ದರೂ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡು ಯು.ಜಿ.ಸಿ ವೇತನ ಪಡೆಯುತ್ತಿದ್ದರೂ ಇಲಾಖೆಯ ಗಮನಕ್ಕೆ ಬಂದಿರಲಿಲ್ಲ. ಮಹಾಲೇಖಪಾಲರು ಆಕ್ಷೇಪಣೆ ವ್ಯಕ್ತಪಡಿಸಿದ ನಂತರ ಕಾಲೇಜು ಶಿಕ್ಷಣ ಇಲಾಖೆಯು ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರಿಗೆ ಅನರ್ಹರಾಗಿದ್ದರೂ ಯು.ಜಿ.ಸಿ ವೇತನ ಪಡೆಯುತ್ತಿರುವ ಸಹಾಯಕ ಪ್ರಾಧ್ಯಾಪಕರ ಪಟ್ಟಿ ಕಳುಹಿಸಿಕೊಡಲು ಸೂಚನೆ ನೀಡಿದೆ. ಸರ್ಕಾರ ಕೂಡಲೇ ಈ ವಿಚಾರವನ್ನು ಸಮಗ್ರವಾಗಿ ಪರಿಶೀಲಿಸಿ, ವಿದ್ಯಾರ್ಹತೆ ಇಲ್ಲದಿದ್ದರೂ ಯು.ಜಿ.ಸಿ ವೇತನ ಪಡೆಯುತ್ತಿರುವ ಅನರ್ಹ 881 ಪ್ರಾಧ್ಯಾಪಕರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತೇನೆ.

ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಕೋರುತ್ತೇನೆ.

**ಉತ್ತರ**

ಸರ್ಕಾರದ ಆದೇಶ ಸಂಖ್ಯೆ:ಇಡಿ:37:ಯುಎನ್ ಇ:2006, ದಿನಾಂಕ:24-12-2009ರಲ್ಲಿ ಸರ್ಕಾರಿ/ಅನುದಾನಿತ ಪದವಿ ಕಾಲೇಜಿನ ಬೋಧಕ ಸಿಬ್ಬಂದಿಗಳಿಗೆ 2006ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸಿ ಆದೇಶಿಸಲಾಗಿರುತ್ತದೆ. ದಿನಾಂಕ:24-12-2009 ರ ಆದೇಶದ ಕಂಡಿಕೆ (Viii)ರಲ್ಲಿ ಈ ಕೆಳಕಂಡಂತೆ ನಿರ್ದೇಶನ ನೀಡಲಾಗಿರುತ್ತದೆ.

> " As from 11-07-2009 the teaching staffs who have not acquired the qualification prescribed by the UGC are not entitled for availing the benefit of UGC revised scheme unless they acquire NET/SLET/Ph.D through coursework and that no M.Phil shall be recognized thereafter until then they shall continue to be in the pre-revised UGC Scale or in the State Pay Scale, as the case may be ".

ಸದರಿ ಷರತ್ತಿನನ್ವಯ ಯುಜಿಸಿ ನಿಗಧಿತ ವಿದ್ಯಾರ್ಹತೆಯಾದ NET/SET/SLET or PhD through coursework ಪಡೆಯದೆ 2006ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸಿರುವ ಕ್ರಮದ ಕುರಿತು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 2017ರಲ್ಲಿ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ.

ಸದರಿ ಆಕ್ಷೇಪಣೆಗೆ ಸಂಬಂಧಿಸಿದಂತೆ ಪರಿಶೀಲಿಸಲಾಗಿ,

1. ಸದರಿ 881 ಆಕ್ಷೇಪಿತ ಬೋಧಕರ ಪಟ್ಟಿಯಲ್ಲಿರುವ ಬಹುತೇಕ ಉಪನ್ಯಾಸಕರುಗಳು 15 ವರ್ಷಕ್ಕೂ ಅಧಿಕ ಸೇವೆ ಸಲ್ಲಿಸಿದ್ದು, ಅವರುಗಳ ನೇಮಕಾತಿ/ವೇತನಾನುದಾನಕ್ಕೊಳಪಡಿಸುವ ಸಂದರ್ಭದಲ್ಲಿ ಜಾರಿಯಲ್ಲಿದ್ದ ಹಾಗೂ ನಿಯಮಾನುಸಾರ ಅಗತ್ಯವಿದ್ದ ವಿದ್ಯಾರ್ಹತೆಗಳನ್ನು ಹೊಂದಿರುವುದನ್ನು ಪರಿಶೀಲಿಸಿ ವಿವಿಧ ಸರ್ಕಾರಿ ಆದೇಶಗಳನ್ವಯ 1986, 1996 ಮತ್ತು 2006 ರ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸಲಾಗಿರುತ್ತದೆ.
2. ಅಲ್ಲದೆ ಅನುದಾನಿತ ಕಾಲೇಜುಗಳಲ್ಲಿ ಸ್ಟಾಪ್ ಗ್ಯಾಪ್ ಉಪನ್ಯಾಸಕರುಗಳಾಗಿ ಸೇವೆ ಸಲ್ಲಿಸಿ ನ್ಯಾಯಾಲಯದ ಆದೇಶದ ಮೇರೆಗೆ ಸೇವಾ ಸಕ್ರಮಾತಿ ಹೊಂದಿದ ಉಪನ್ಯಾಸಕರುಗಳು ಈ ಪಟ್ಟಿಯಲ್ಲಿದ್ದು, ಅವರುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 160 ಯುಪಿಸಿ 2008 ದಿನಾಂಕ:06-06-2009ರನ್ವಯ ಯುಜಿಸಿ ನಿಗದಿತ ಅರ್ಹತೆ ಪಡೆಯದಿದ್ದಾಗ್ಯೂ ಕೂಡಾ 1996ರ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸಲಾಗಿರುತ್ತದೆ.
3. ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದು, ನ್ಯಾಯಾಲಯದ ಆದೇಶಗಳ ಮೇರೆಗೆ ಸೇವಾ ಸಕ್ರಮಾತಿ ಹೊಂದಿದ ಉಪನ್ಯಾಸಕರುಗಳು ಕೂಡಾ ಈ 881 ಉಪನ್ಯಾಸಕರುಗಳ ಪಟ್ಟಿಯಲ್ಲಿದ್ದು ಸದರಿ ಉಪನ್ಯಾಸಕರುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 37 ಯುಎನ್ಇ 2009, ದಿನಾಂಕ:26-12-2009ರನ್ವಯ ದಿನಾಂಕ:11-07-2009ರೊಳಗೆ ಪಡೆದಿರುವ ಎಂಫಿಲ್ ಪದವಿಯನ್ನು ಪರಿಗಣಿಸಿ 2006ರ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸಲಾಗಿರುತ್ತದೆ.
4. 2009ರಲ್ಲಿ ಸರ್ಕಾರಿ ಕಾಲೇಜುಗಳಿಗೆ ಕರ್ನಾಟಕ ಲೋಕ ಸೇವಾ ಆಯೋಗದಿಂದ ಉಪನ್ಯಾಸಕರ ನೇಮಕಾತಿ ಮಾಡಿಕೊಳ್ಳಲಾದ ಸಂದರ್ಭದಲ್ಲಿ ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: ಇಡಿ 21 ಯುಜಿಹೆಚ್ 2010, ದಿನಾಂಕ:05-06-2010ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದ ದಿನಾಂಕ:24-12-2007ರ ಪ್ರಕಟಣೆಯನ್ವಯ ಅರ್ಜಿ ಸಲ್ಲಿಸಿ ಆಯ್ಕೆಗೊಂಡು ನೇಮಕಾತಿ ಹೊಂದಿದ ಉಪನ್ಯಾಸಕರುಗಳಿಗೆ ಎನ್ಇಟಿ/ಎಸ್ಎಲ್ಇಟಿ/ಪಿಹೆಚ್ ಡಿ ಅರ್ಹತೆಯನ್ನು ಹೊಂದಬೇಕೆನ್ನುವ ಷರತ್ತನ್ನು ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ತೆಗೆದುಹಾಕಲಾಗಿದ್ದು, ನೇಮಕಾತಿಗೆ ಎಂ.ಫಿಲ್ ಪದವಿಯನ್ನು ಪರಿಗಣಿಸಲಾಗಿರುತ್ತದೆ.

ಈ ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ, 2006ಕ್ಕೂ ಪೂರ್ವದಲ್ಲಿ ನೇಮಕಾತಿ/ವೇತನಾನುದಾನಕ್ಕೊಳಪಟ್ಟ ದಿನಾಂಕದಂದು ಜಾರಿಯಲ್ಲಿದ್ದ ನಿಯಮಗಳನ್ವಯ ಅಗತ್ಯ ವಿದ್ಯಾರ್ಹತೆಯನ್ನು ಹೊಂದಿ ಈಗಾಗಲೇ 1996 ರ ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿದ್ದ ಉಪನ್ಯಾಸಕರುಗಳಿಗೆ ದಿನಾಂಕ:24-12-2009ರ ಆದೇಶ ಸಂಖ್ಯೆ:ಇಡಿ/37/ಯುಎನ್ಇ/2009 ರ ಕಂಡಿಕೆ (viii) ಅನ್ವಯಿಸದಿರುವ ಬಗ್ಗೆ ಸ್ಪಷ್ಟೀಕರಣ ನೀಡಿ ಈ ಕಂಡಿಕೆಯ ಆಕ್ಷೇಪಣೆಯನ್ನು ತೀರುವಳಿಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ.

**ಸಂಖ್ಯೆ:ಇಡಿ 345 ಡಿಸಿಇ 2025(ಇ)**

(ಡಾ. ಎಂ. ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು